Press Clipping

Publication : **Vijayavani**

Date : **April 11, 2016**

Edition : **State**

Page : **1**

ಕನ್ನಡಕ್ಕೆ ರಸುಲ್ ಪೂಕುಟ್ಟಿ ಎಂಟ್ರಿ!

ಸ್ಲಮ್‌ಡಾಗ್ ಮಿಲಿಯನೇರ್ ಖ್ಯಾತಿಯ ಆಸ್ಕರ್ ವಿಜೇತ ಸೌಂಡ್ ಡಿಸೈನರ್ ರಸುಲ್ ಪೂಕುಟ್ಟಿ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಿದ್ದಾರೆ. ನಿರ್ದೇಶಕ ಗಿರೀಶ್ ಕಾಸರವಳ್ಳಿ ಪುತ್ರ ಅಪೂರ್ವ ಕಾಸರವಳ್ಳಿ ಜೊಜ್ಜಲ ನಿರ್ದೇಶನದ 'ನಿರುತ್ತರ'ಕ್ಕೆ ಸೌಂಡ್ ಡಿಸೈನ್ ಮಾಡುತ್ತಿದ್ದಾರೆ ಅವರು. 'ಗೆಳೆಯನ ಮೂಲಕ ರಸುಲ್ ಪರಿಚಯವಾಯಿತು. ಅವರು ಅಮೆರಿಕಕ್ಕೆ ಹೊರಟಿದ್ದರು. ಅದೇ ಸಮಯದಲ್ಲಿ 20 ನಿಮಿಷ ಅಪಾಯಿಂಟ್‌ಮೆಂಟ್ ಕೇಳಿ, ಮುಂಬೈನಲ್ಲಿ ಭೇಟಿಯಾಗಿದ್ದೆ. ಅದರೆ ನಾನು ಕಥೆ ಹೇಳಲು ಪ್ರಾರಂಭಿಸಿದಾಗ ಸುಮಾರು ಒಂದು ತಾಸಿಗೂ ಹೆಚ್ಚು ಕಾಲ ನನ್ನ ಮಾತುಗಳನ್ನು ಆಲಿಸಿದರು. ಕಥೆ ಕೇಳಿ ಅವರಿಗೂ ಇಷ್ಟವಾಯಿತು. ಹೀಗಾಗಿ ರಾತ್ರಿ 11 ಗಂಟೆ ಸಮಯದಲ್ಲಿ ಅಮೆರಿಕ ವಿಮಾನ ಹತ್ತುವ ಮುನ್ನ ನಮ್ಮ ಚಿತ್ರದಲ್ಲಿ ಕೆಲಸ ಮಾಡಲು ಒಪ್ಪಿರುವುದಾಗಿ ತಿಳಿಸಿದರು' ಎಂದು ರಸುಲ್ ಕನ್ನಡ ಚಿತ್ರಕ್ಕೆ ಬಂದಿದ್ದನ್ನು ವಿವರಿಸುತ್ತಾರೆ ನಿರ್ದೇಶಕ ಅಪೂರ್ವ.

'ಕನ್ನಡ ಚಿತ್ರಗಳಲ್ಲಿ ಸೌಂಡ್ ಡಿಸೈನರ್ ಬಳಸುವ ಉದಾಹರಣೆ ಕಡಿಮೆ. ಹೀಗಾಗಿಯೇ ಆಸ್ಕರ್ ವಿಜೇತ ಸೌಂಡ್ ಡಿಸೈನರ್ ಹಾಗೂ ದೊಡ್ಡ ಬಾಲಿವುಡ್ ಚಿತ್ರಗಳಲ್ಲಿ ಕೆಲಸ ಮಾಡಿರುವ ತಂತ್ರಜ್ಞರೊಬ್ಬರು ಬಂದು ಕನ್ನಡದಲ್ಲಿ ಕೆಲಸ ಮಾಡಿದ್ದಾರೆ. ಅವರಿಂದ ನಮ್ಮ ಹುಡುಗರು ಕೆಲಸ ಕಲಿಯಬಹುದು. ಇದು ಕನ್ನಡ ಚಿತ್ರರಂಗದ ಬೆಳವಣಿಗೆಗೆ ಸಹಕಾರಿ' ಎಂದು ಹೇಳುವುದನ್ನೂ ಅಪೂರ್ವ ಕಾಸರವಳ್ಳಿ ಮರೆಯುವುದಿಲ್ಲ. ಸದ್ಯ ಮುಂಬೈನಲ್ಲಿ ಸೌಂಡ್ ಡಿಸೈನಿಂಗ್ ಕೆಲಸಗಳು ಭರದಿಂದ ಸಾಗಿದ್ದು, ಇನ್ನೊಂದು ತಿಂಗಳಲ್ಲಿ ಸಂಪೂರ್ಣ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಳ್ಳಬಹುದು ಎಂಬ ನಿರೀಕ್ಷೆ 'ನಿರುತ್ತರ' ಚಿತ್ರತಂಡದ್ದು. ಇದೇ ಮೇ 18ರಂದು ಆಡಿಯೋ ಲಾಂಚ್ ಮಾಡುತ್ತಿರುವ ಚಿತ್ರತಂಡ, ಅಂದುಕೊಂದಂತಾದರೆ ಜೂನ್ ಅಂತ್ಯಕ್ಕೆ ಸಿನಿಮಾ ರಿಲೀಸ್ ಮಾಡುವ ಯೋಜನೆ ಹಾಕಿಕೊಂಡಿದೆ.